<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ವಾದಿಯರ ಪರವಾಗಿಃ ಶ್ರೀಮತಿ ಬಿ ಟಿ ಎಸ್ ವಕೀಲರಿಂದಃ</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಬೈನಕಲ್ ಬೋರಯ್ಯನ ಮಗ ಪಾಲಯ್ಯನು ದಿನಾಂಕ 17.11.1945 ರಂದು ಮಾತೃಭೂಮಿ ಪತ್ರಿಕೆಯಲ್ಲಿ ತನ್ನನ್ನು ಬಿಟ್ಟು ಹೋದ ಪಾಲಮ್ಮನಿಗೂ ತನಗೂ ಸಂಬಂದವೇ ಇಲ್ಲ ಎಂದು ಕೊಟ್ಟ ಸಾರ್ವಜನಿಕ ನೋಟಿಸಿನ ಬಗ್ಗೆ ಮಾತೃ ಭೂಮಿ ದಿನ ಪತ್ರಿಕೆಯ ಪತ್ರಿಕೆಯನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 1 ಆಗಿದೆ. ತಹಶೀಲ್ದಾರರು ನೀಡಿದ ಒಂದನೇ ಪ್ರತಿವಾದಿಯ ಕುಟುಂಬದ ವಂಶವೃಕ್ಷದ ದೃಡಿಕರಣ ಪತ್ರವನ್ನು ಪ್ರಮಾಣ ಪತ್ರದೊಂದಿಗೆ ಹಾಜರುಪಡಿಸುತ್ತಿದ್ದು ಅದು ನಿಡಿ 2 ಆಗಿದೆ. ತಹಶೀಲ್ದಾರರು ನೀಡಿದ ಎರಡನೇ ಪ್ರತಿವಾದಿಯ ಕುಟುಂಬದ ವಂಶವೃಕ್ಷದ ದೃಡಿಕರಣ ಪತ್ರವನ್ನು ಪ್ರಮಾಣ ಪತ್ರದೊಂದಿಗೆ ಹಾಜರುಪಡಿಸುತ್ತಿದ್ದು ಅದು ನಿಡಿ 3 ಆಗಿದೆ. ದಿನಾಂಕ 06.06.1966 ರಂದು ಸದರಿ ನೋಟಿಸು ಕೊಟ್ಟ ಪಾಲಯ್ಯ ತನ್ನ ಎರಡನೆ ಹೆಂಡತಿ ಪಾಪಮ್ಮನಿಗೆ ಬರೆದುಕೊಟ್ಟ ನೊಂದಾಯಿತ ದಾನ ಪತ್ರದ ದೃಡಿಕೃತಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 4 ಆಗಿದೆ. ಸದರಿ ಪಾಪಮ್ಮ ಹಾಗೂ ಪಾಲಯ್ಯನ ಸಹೋದರರು ದಿನಾಂಕ 14.06.1966

ರಂದು ಮಾಡಿಕೊಂಡ ನೊಂದಾಯಿತ ಪಾಲುವಿಬಾಗ ಪತ್ರದ ದೃಡಿಕೃತಿ ಪ್ರತಿ ಹಾಜರುಪಡಿಸುತ್ತಿದ್ದು ಅದು ನಿಡಿ 5 ಆಗಿದೆ. ದಿನಾಂಕ 26.04.1996 ರಂದು ಪಾಪಮ್ಮಳು ಎರಡನೇ ಪ್ರತಿವಾದಿಗೆ ದಾವಾ ಬಿ ಷೆಡ್ಯೂಲ್ ಸ್ವತ್ತಿನ ಮೂರು ಮತ್ತು ನಾಲ್ಕನೇ ಸ್ವತ್ತುಗಳನ್ನು ಮಾರಾಟ ಮಾಡಿದ ಬಗ್ಗೆ ನೊಂದಾಯಿತ ಮೂಲ ಕ್ರಯ ಪತ್ರ ಹಾಜರುಪಡಿಸುತ್ತಿದ್ದು ಅದು ನಿಡಿ 6 ಆಗಿದೆ. ಸದರಿ ಪತ್ರದ ತಿದ್ದುಪಡಿ ಪತ್ರವನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 7 ಆಗಿದೆ. ಅದೇ ದಿನ ಸದರಿ ಪಾಪಮ್ಮಳು ಒಂದನೇ ಪ್ರತಿವಾದಿಗೆ ಬಿ ಷೆಡ್ಯೂಲ್ ಐಟಂ ನಂ.1 ಮತ್ತು 2 ಅನ್ನು ಮಾರಾಟ ಮಾಡಿದ ಬಗ್ಗೆ ನೊಂದಾಯಿತ ಕ್ರಯ ಪತ್ರವನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 8 ಆಗಿದೆ. ಸದರಿ ಪತ್ರದ ತಿದ್ದುಪಡಿ ಪತ್ರವನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 9 ಆಗಿದೆ. ದಿನಾಂಕ 28.05.2011 ರಂದು ಎರಡನೇ ಪ್ರತಿವಾದಿ ತನ್ನ ಹೆಂಡತಿಗೆ ಬರೆದುಕೊಟ್ಟ ನೊಂದಾಯಿತ ದಾನಪತ್ರವನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 10 ಆಗಿದೆ. ದಿನಾಂಕ 12.11.1991 ರಂದು ಪಾಪಮ್ಮ ಬರೆದುಕೊಟ್ಟ ನೊಂದಾಯಿತ ವಿಲ್ ಯಾನೆ ಮರಣ ಶಾಸನ ಹಾಜರುಪಡಿಸುತ್ತಿದ್ದು ಅದು ನಿಡಿ 11 ಆಗಿದೆ. ಪಾಪಮ್ಮಳ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 12 ಆಗಿದೆ. ದಾವಾ ಸ್ವತ್ತುಗಳ ಬಗ್ಗೆ ಮೂರು ಪುಟದ ಒಂದು ಹಾಗೂ ಒಂದು ಪುಟದ ಒಂದು ಒಟ್ಟು ಎರಡು ಗಣಕೀಕೃತ ಮುಟ್ಯೇಶನ್ ಎಕ್ಸ್ ಟ್ರಾಕ್ಟ್ ಗಳನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 13 ಮತ್ತು 14 ಆಗಿದೆ. ದಾವಾ ಸ್ವತ್ತುಗಳ ಬಗ್ಗೆ ಮೂರು ಕೈ ಬರಹದ ಮುಟ್ಯೇಶನ್ ಎಕ್ಸ್ ಟ್ರಾಕ್ಟ್ ಗಳ ದೃಡಿಕೃತಿ ಪ್ರತಿಗಳನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 15 ರಿಂದ 17 ಆಗಿದೆ. 3 ನೇ ವಾದಿಯ ಶಾಲಾ ದಾಖಲಾತಿ

ಹಾಜರುಪಡಿಸುತ್ತಿದ್ದು ಅದು ನಿಡಿ 18 ಆಗಿದೆ. 7 ನೇ ವಾದಿಯ ಗಂಡ ಟಿ ಒಬಯ್ಯ ನ ಶಾಲಾ ದಾಖಲಾತಿ ಹಾಜರುಪಡಿಸುತ್ತಿದ್ದು ಅದು ನಿಡಿ 19 ಆಗಿದೆ. ದಾವಾ ಸ್ವತ್ತುಗಳ ಮೂರು ಪುಟದ ಒಂದು ಒಂದು ಪುಟದ ಆರು ಒಟ್ಟು ಏಳು ಗಣಕೀಕೃತ ಆರ್ ಟಿ ಸಿ ಗಳನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 20 ರಿಂದ 26 ಆಗಿದೆ. ದಾವಾ ಸ್ವತ್ತಿಗೆ ಕಂದಾಯ ಕಟ್ಟಿದ ಬಗ್ಗೆ ನಾಲ್ಕು ರಸೀದಿಗಳನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 27 ರಿಂದ 30 ಆಗಿದೆ. ಚಿತ್ರದುರ್ಗದ ಪ್ರಿನ್ಸಿಪಾಲ್ ಮುನ್ಸಿಫ್ ನ್ಯಾಯಾಲಯದಲ್ಲಿ ನಡೆದ ಅಸಲು ದಾವೆ 81/91 ರ ತೀರ್ಪು ಮತ್ತು ಡಿಕ್ರಿಯ ದೃಡಿಕೃತಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 31 ಮತ್ತು 32 ಆಗಿದೆ. ಇದೇ ನ್ಯಾಯಾಲಯದಲ್ಲಿ ನಡೆದ ಆರ್ ಎ 71/93 ರ ತೀರ್ಪು ಮತ್ತು ಡಿಕ್ರಿಯ ದೃಡಿಕೃತಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದು ನಿಡಿ 33 ಮತ್ತು 34 ಆಗಿದೆ. ಆದ್ದರಿಂದ ವಾದಿಯ ದಾವೆಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲು ವಾದಿಯರ ಪರವಾಗಿಃ ಶ್ರೀ ಸಿ ಕೆ ಎಸ್ ವಕೀಲರಿಂದಃ**

ಶ್ರೀ ವೈ ಎಂ ಕೆ ವಕೀಲರು ಸಮಯ ಕೋರಿರುತ್ತಾರೆ. ನೀಡಿದೆ

**ಪಾಟೀ ಸವಾಲು 10 ನೇ ಪ್ರತಿವಾದಿಯ ಪರವಾಗಿಃ ಶ್ರೀ ಎಂ ಎಸ್ ಆರ್ ವಕೀಲರಿಂದಃ**

ಶ್ರೀ ಕೆ ವಿ ಎಚ್ ಆರ್ ವಕೀಲರು ಸಮಯ ಕೋರಿರುತ್ತಾರೆ. ನೀಡಿದೆ

**ಪಾಟೀ ಸವಾಲು 26 ನೇ ಪ್ರತಿವಾದಿಯ ಪರವಾಗಿಃ ಶ್ರೀ ಬಿ ಟಿ ಜಿ ವಕೀಲರಿಂದಃ**

ಸಮಯ ಕೋರಿರುತ್ತಾರೆ. ನೀಡಿದೆ

D.W.1. Papanna @
Papaiah @ Sanna Papanna
Date: 29.08.2019

**<u>ಪಾಟೀ ಸವಾಲು 8 ನೇ ಪ್ರತಿವಾದಿಯ ಪರವಾಗಿಃ ಶ್ರೀ ಬಿ ಕೆ ಪಿ ವಕೀಲರಿಂದಃ</u>**

ಗೈರುಹಾಜರು, ತಕರಾರು ಸಲ್ಲಿಸದೆ ಇರುವುದರಿಂದ ಇಲ್ಲ ಎಂದು ಪರಿಗಣಿಸಿದೆ

ಪಾಟೀ ಸವಾಲು 11 ರಿಂದ 25, 4ಎ ರಿಂದ 4ಸಿ ಹಾಗೂ 27 ರಿಂದ 33 ನೇ ಪ್ರತಿವಾದಿಯ ಪರವಾಗಿಃ ಗೈರುಹಾಜರು, ಏಕಪಕ್ಷೀಯವಾಗಿರುವುದರಿಂದ ಇಲ್ಲ ಎಂದು ಪರಿಗಣಿಸಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.